ಅ) ಕಳೆದ ಮೂರು ವರ್ಷಗಳಲ್ಲಿ ವಸೂಲಾದ ಮಾರುಕಟ್ಟೆ ಶುಲ್ಕದ ವಿವರ ಈ ಕೆಳಕಂಡಂತಿದೆ.

ವರ್ಷ	ಮಾರುಕಟ್ಟೆ ಶುಲ್ಕ ರೂ.ಗಳಲ್ಲಿ
1997-98	5931-00
1998-99	7053-00
1999-2000	7338-00

ಆ) ಅಭಿವೃದ್ಧಿಪಡಿಸಿದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳಲ್ಲಿ ಈ ಕೆಳಕಂಡ ಪ್ರಮುಖ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ರೈತಭವನ, ಹರಾಜುಕಟ್ಟೆಗಳು, ದಾಸ್ತಾನು ಮಳಿಗೆಗಳು, ಉಪಹಾರ ಗೃಹ, ಶೌಚಾಲಯಗಳು, ಶೈತ್ಯಾಗಾರ, ಸಂಪರ್ಕ ರಸ್ತೆಗಳು, ಕಣಗಳ ನಿರ್ಮಾಣ, ಅಂಚೆ ಕಛೇರಿ ಮತ್ತು ಬ್ಯಾಂಕ್ ಭದ್ರತಾ ವ್ಯವಸ್ಥೆ, ಪ್ರಾಂಗಣದ ಸ್ವಚ್ಛತೆ ಕುಡಿಯುವ ನೀರು, ತೂಕದ ಯಂತ್ರ. ರೈತ ಸಂಜೀವಿನಿ ಯೋಜನೆ, ಅಡಮಾನ ಸಾಲ ಯೋಜನೆ, ಫ್ಲೋರ್ ಪ್ರೆಸ್ ಯೋಜನೆ, ರೈತರ ತರಬೇತಿ ಹಾಗೂ ಆಯ್ದ ಮಾರುಕಟ್ಟೆಗಳಲ್ಲಿ ರೈತರ ಉತ್ಪನ್ನಗಳ ಸಾಗಾಣಿಕೆಗಾಗಿ ವಾಹನಗಳನ್ನು ಒದಗಿಸುವುದು ಮತ್ತು ನ್ಯೂಸ್ ನೆಟ್ ಮೂಲಕ ಪ್ರಮುಖ ಮಾರುಕಟ್ಟೆಗಳ ಧಾರಣೆ ಬಿತ್ತರ ಮಾಡುವುದು.

ಈ) ವಿವಿಧ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ 136 ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಅಳವಡಿಸಲಾಗಿದೆ.

ಗುಲ್ಬರ್ಗಾ ಹಾಗೂ ಯಾದಗಿರಿ ಡಿಪೋ ಬಸ್ಸುಗಳು ಸಮಯಕ್ಕೆ ಸಂಚರಿಸುವ ವ್ಯವಸ್ಥೆ

2981 -ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಹಾಗೂ ಯಾದಗಿರಿ ಡಿಪೋ ಬಸ್ಸುಗಳು ಸೇಡಂ ಕ್ಷೇತ್ರದ ರಸ್ತೆಗಳ ಮೇಲೆ ತಿಂಗಳಾನುಗಟ್ಟಲೆ ಸಮಯಕ್ಕೆ ಸರಿಯಾಗಿ ಸಂಚರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಗುಲ್ಬರ್ಗಾ ಡಿಪೋ ಬಸ್ಸು ಸೇಡಂ ಹಂದರಿಕಿ ರಸ್ತೆಯ ಮೇಲೆ ಬೆನಕನಹಳ್ಳಿ ಮಾರ್ಗವಾಗಿ ಹೋಗುವ ಬಸ್ಸು ಜೂನ್‌ದಿಂದ ಇಲ್ಲಿಯವರೆವಿಗೂ ಸಂಚರಿಸಿರುವ ದಿನಗಳು ಎಷ್ಟು? ಇದೇ ಪ್ರಕಾರ ಯಾದವಗಿರಿ ಡಿಪೋ ಬಸ್ಸು ಭೀಮನಹಳ್ಳಿ ಮಾರ್ಗವಾಗಿ ಬೆಳಗೇರಾ ಯಾಗಾಪೂರಿಗೆ ಜೂನ್‌ದಿಂದ ಇಲ್ಲಿಯವರೆಗೆ ಸಂಚರಿಸಿದ ದಿನಗಳು ಎಷ್ಟು?*

ಇ) *ಈ ರೀತಿ ಮೇಲಿನ ಡಿಪೋ ಬಸ್ಸುಗಳು ಹೆಚ್ಚುಕಡಿಮೆ ಎಲ್ಲಾ ರಸ್ತೆಗಳ ಮೇಲೆ ಸಂಚಾರ ಆವ್ಯವಸ್ಥೆಯಾಗಿರುವ ಬಗ್ಗೆ ಕ್ರಮಕೈಗೊಂಡು ಮುಂದೆ ಈ ರೀತಿಯಾಗದಂತೆ ಸರಿಯಾದ ಸಂಚಾರ ವ್ಯವಸ್ಥೆ ಮಾಡಲಾಗುವುದೆ?*

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಯಾದಗಿರಿ ಮತ್ತು ಗುಲ್ಬರ್ಗಾ ಘಟಕಗಳಿಂದ ಸೇಡಂ ವಿಧಾನಸಭಾ ಕ್ಷೇತ್ರದಲ್ಲಿ ಕಾರ್ಯಚರಣೆಯಾಗುತ್ತಿರುವ ಒಟ್ಟು 17 ಅನುಸೂಚಿಗಳ ಪೈಕಿ 3 ಅನುಸೂಚಿಗಳ ಕಾರ್ಯಾಚರಣೆ ನಿಯಮಿತವಾಗಿರುವುದಿಲ್ಲದಿರುವುದು ಗಮನಕ್ಕೆ ಬಂದಿದೆ.

ಆ) 1) ಗುಲ್ಬರ್ಗಾ ಘಟಕದ ಬೆನಕನಹಳ್ಳಿ ಮಾರ್ಗವಾಗಿ ಸಂಚರಿಸುವ ಗುಲ್ಬರ್ಗಾ - ಸೇಡಂ - ಹಂದರಿಕಿ ಸಾರಿಗೆಯು ಈ ಕೆಳಗಿನಂತೆ ಕಾರ್ಯಚರಣೆಯಾಗಿರುತ್ತದೆ.

ಜೂನ್	23 ದಿನಗಳು
ಜುಲೈ	26 "
ಆಗಸ್ಟ್	20 "
ಸೆಪ್ಟೆಂಬರ್	17 "

2) ಬೀಮನಹಳ್ಳಿ ಮಾರ್ಗಾವಾಗಿ ಬೆಳಗೇರಾ ಮತ್ತು ಯಾಗಾಪುರಕ್ಕೆ ಯಾದಗಿರಿ ಘಟಕದ ಯಾವುದೇ ಸಾರಿಗೆಯು ಕಾರ್ಯಾಚರಣೆಯಲ್ಲಿರುವುದಿಲ್ಲ.

ಇ) ಹೌದು.

ಮುಸಿಕಿನ ಜೋಳದ ಬೆಳೆಗೆ ಬೆಂಬಲ ಬೆಲೆ ನಿಗದಿ

2982 - Sri H.C. Basavaraju (ಪಿರಿಯಾ ಪಟ್ಟಣ) : Will the Minister of State for Agricultural Marketing be pleased to State?

a) *Whether it has come to the notice of the Government the farmers are facing hardship due to fall in prices of maize in the market of the state particularly in the Periyaptna taluk?*

b) *What are the action taken for purchase of this commodity under the support price fixed by the Government in consultation with Central Govt?*

c) *How many procure centres are opened so far and the total quantity of this produced purchase?*